# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 856
ಸದಸ್ಯರ ಹೆಸರು : ಶ್ರೀ ಸುನೀಲ್ ವಲ್ಯಾಪುರ್
(ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 1103.2026
ಉತ್ತರಿಸುವ ಸಚಿವರು : ಕಂದಾಯ ಸಚಿವರು.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| 1 | ಬೆಂಗಳೂರು ನಗರ ಜಿಲ್ಲೆ, ಜಿಗಣಿ ಹೋಬಳಿ ಬನ್ನೇರುಘಟ್ಟ ಗ್ರಾಮ ಪಂಚಾಯಿತಿಯ ಭೂತಾನಹಳ್ಳಿ ಗ್ರಾಮದ ಸರ್ವೆ ನಂ 67 ರಲ್ಲಿ ಸರ್ಕಾರಿ ಆದೇಶದ ಸಂಖ್ಯೆ ಜೆ 416-ಎಫ್ ಟಿ-27-33-35 ದಿನಾಂಕ: 17.03.1934 ರ ಆಕಾರಬಂದ್ ಪ್ರಕಾರ ಒಟ್ಟು ವಿಸ್ತೀರ್ಣ 549.24 ಎಕರೆಯಲ್ಲಿ 525 ಎಕರೆ ಭೂಮಿಯನ್ನು ಅರಣ್ಯ ಇಲಾಖೆಯ ಪಡೆದು ಸ್ವಾಧೀನದಲ್ಲಿ ಇರುತ್ತದೆ ಎಂದು ಅರಣ್ಯ ಇಲಾಖೆ ನಕ್ಷೆ ಸಹಿತ ಹಿಂಬರಹ ನೀಡಿದ್ದು, ಉಳಿಕೆಯಾದ ಜಮೀನು ಎಷ್ಟು; (ಅದರ ನಕ್ಷೆ ಮತ್ತು ಗಡಿರೇಖೆ ಸಹಿತ ಪೂರ್ಣ ಮಾಹಿತಿಯೊಂದಿಗೆ ನೀಡುವುದು) | ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು ಭೂತಾನಹಳ್ಳಿ ಗ್ರಾಮದ ಸರ್ವೆ ನಂ 67 ಮೂಲತಃ ಸರ್ಕಾರಿ ಗೋಮಾಳ ಜಮೀನಾಗಿದ್ದು, ಆಕಾರ್ ಬಂದ್ ಮತ್ತು ಮೂಲ ಸರ್ವೆ ದಾಖಲೆಯಂತೆ ಒಟ್ಟು ವಿಸ್ತೀರ್ಣ 549-24 ಎಕರೆ/ಗುಂಟೆ ಇರುತ್ತದೆ.<br>ಈ ಪೈಕಿ ಅಂದಿನ ಮೈಸೂರು ಸರ್ಕಾರದ ಆದೇಶದ ಸಂಖ್ಯೆ ಜೆ 416-ಎಫ್ ಟಿ-27-33-35 ದಿನಾಂಕ 17.03.1934 ರಂತೆ 525-00 ಎಕರೆ ವಿಸ್ತೀರ್ಣದ ಜಮೀನು ಅರಣ್ಯ ಇಲಾಖೆಗೆ ಮಂಜೂರಿಯಾಗಿರುತ್ತದೆ ಆದರೆ ಅರಣ್ಯ ಇಲಾಖೆಯವರು ತಮಗೆ ಮಂಜೂರಿಯಾಗಿರುವ ಜಮೀನನ್ನು ಸ್ವಾಧೀನಕ್ಕೆ ಪಡೆದುಕೊಂಡಿರುವುದಿಲ್ಲ. 2006 ನೇ ಸಾಲಿನಲ್ಲಿ ಸರ್ಕಾರದಿಂದ ರಚಿಸಲಾಗಿರುವ ಜಂಟಿ ಸದನ ಸಮಿತಿಯಿಂದ ಸರ್ಕಾರಿ ಜಮೀನುಗಳ ಅಳತೆ ಕಾರ್ಯ ಕೈಗೊಂಡಾಗ ಭೂತಾನಹಳ್ಳಿ ಗ್ರಾಮದ ಸ.ನಂ 67 ರಲ್ಲಿ 525-00 ಎಕರೆ ಜಮೀನು ಅರಣ್ಯ ಇಲಾಖೆಗೆ ಮಂಜೂರಿಯಾಗಿರುವುದು ಮತ್ತು ಭೌತಿಕವಾಗಿ 410-21 ಎಕರೆ/ಗುಂಟೆ ಮಾತ್ರ ಇರುವುದು ಕಂಡುಬರುತ್ತದೆ. ತದನಂತರ ಅರಣ್ಯ ಇಲಾಖೆಯವರು ಈ ಜಮೀನನ್ನು ತಮ್ಮ ವಶಕ್ಕೆ ಪಡೆದು ಅನುಭವದಲ್ಲಿ ಇರುತ್ತಾರೆ. |
| 2 | ಅರಣ್ಯ ಇಲಾಖೆ ಒತ್ತುವರಿ ಹೊರತು ಪಡಿಸಿ ಉಳಿಕೆ ಜಾಗ ಜಂಟಿ ಮೋಜಣಿಯಾಗಿದ್ದು, ಸದರಿ ಗಡಿರೇಖೆ (ಡಿ-ಲೈನ್) ಜಮೀನು ಗೋಮಾಳ ಪ್ರದೇಶವಾಗಿದ್ದು, ಅದು ಎಷ್ಟು ಜನರಿಗೆ ಭೂಮಿ ಹಂಚಿಕೆಯಾಗಿದೆ; (ಅದರ ಅಳತೆಯೊಂದಿಗೆ ಪೂರ್ಣ ಮಾಹಿತಿ ಮತ್ತು ಉಳಿಕೆ ಜಮೀನು ಎಷ್ಟು; (ಸಂಪೂರ್ಣ ಮಾಹಿತಿ | ಸರ್ಕಾರದ ಆದೇಶ ಸಂಖ್ಯೆ FEE 52FGL-2013 ದಿನಾಂಕ:26-10-2017 ರ ಆದೇಶದನ್ವಯ ಭೂದಾಖಲೆಗಳ ಜಂಟಿ ನಿರ್ದೇಶಕರ ಜ್ಞಾಪನ ಸಂಖ್ಯೆ: ಭೂ.ಜಂ.ನಿ/ಭೂ.ಸಾ.ನಿ/ ತಾಂತ್ರಿಕ/656/16-17 ದಿನಾಂಕ: 21-03-2017 ರಂತೆ ಅರಣ್ಯ ಇಲಾಖೆ ಮತ್ತು ಭೂದಾಖಲೆಗಳ ಇಲಾಖೆಯಿಂದ ಜಂಟಿ ಅಳತೆ |

| | | |
|---|---|---|
| | ನೀಡುವುದು): | ಮಾಡಲಾಗಿರುತ್ತದೆ ಈ ನಕ್ಷೆಯಲ್ಲಿ 182-23 ಎಕರೆ/ಗುಂಟೆ ಒತ್ತುವರಿ ಎಂದು ವಿವರಿಸಲಾಗಿರುತ್ತದೆ. ಸ.ನಂ 67 ರಲ್ಲಿ 1950 ರಿಂದ 1960 ನೇ ಸಾಲಿನಲ್ಲಿ ಅಂದಿನ ಅಮಲ್ದಾರ್ ರವರು ಸರ್ಕಾರದ ಆದೇಶ, ಜಿಲ್ಲಾಧಿಕಾರಿಗಳ ಆದೇಶ, ಉಪವಿಭಾಗಾಧಿಕಾರಿಗಳ ಆದೇಶ ಅನುಸರಿಸಿ ಒತ್ತುವರಿ ಮಾಡಿ ಸಾಗುವಳಿ ಮಾಡುತ್ತಿದ್ದ 63 ಜನರಿಗೆ ದರಖಾಸ್ತು ಮೂಲಕ ಭೂ ಮಂಜೂರಿ ಮಾಡಿರುತ್ತಾರೆ. |
| 3 | ಬೆಂಗಳೂರು ಜಿಲ್ಲೆ ವಿಶೇಷ ಜಿಲ್ಲಾಧಿಕಾರಿಗಳು ಭೂತನಹಳ್ಳಿ ಗ್ರಾಮದಸರ್ವೇ ನಂ 67 ರಲ್ಲಿ ಕೆಲವರ ಜಮೀನುಗಳು ಮಾತ್ರ ಪಹಣಿ ತಿದ್ದುಪಡಿ ಮಾಡಿ ಕೇವಲ ಕೋರ್ಟ್ ಆದೇಶದಲ್ಲಿರುವವರು ಮಾತ್ರ ವ್ಯವಸಾಯ ಮಾಡುತ್ತಿದ್ದು, ಕೋರ್ಟ್‌ಗೆ ಹೋಗದ ರೈತರಿಗೆ ವ್ಯವಸಾಯ ಮಾಡಲು ಕೊಡುತ್ತಿದ್ದು, ಸರ್ಕಾರದ ಈ ತಪ್ಪಿನಿಂದ ಬಡ ಜನರಿಗೆ ತೊಂದರೆಯಾಗುತ್ತಿರುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ; (ಸಂಪೂರ್ಣ ಮಾಹಿತಿ ನೀಡುವುದು); | 2006 ರಲ್ಲಿ ರಚಿಸಲಾದ ಜಂಟಿ ಸದನ ಸಮಿತಿಯ ವರದಿಯಲ್ಲಿ ಭೂತಾನಹಳ್ಳಿ ಗ್ರಾಮದ ಸ.ನಂ 67 ರಲ್ಲಿ ಅಕ್ರಮ ಒತ್ತುವರಿ ಎಂದು ಪರಿಗಣಿಸಿದ್ದು, ಅರಣ್ಯ ಇಲಾಖೆಗೆ ಮಂಜೂರಿಯಾಗಿರುವ ಈ ಜಮೀನುಗಳಲ್ಲಿನ ಮಂಜೂರಾತಿಯನ್ನು ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(3) ರಡಿ ವಿಶೇಷ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಕರಣಗಳನ್ನು ದಾಖಲಿಸಲಾಗಿರುತ್ತದೆ. ಈ ಪ್ರಕರಣಗಳಲ್ಲಿ ಮಂಜೂರಿದಾರರ ಹೆಸರನ್ನು ತೆಗೆದು ಭೂತಾನಹಳ್ಳಿ ಕಿರು ಅರಣ್ಯ ಪ್ರದೇಶ ಎಂದು ಪಹಣಿ ತಿದ್ದುಪಡಿ ಮಾಡಲು ಆದೇಶಗಳಾಗಿರುತ್ತವೆ. ಈ ವಿಶೇಷ ಜಿಲ್ಲಾಧಿಕಾರಿಗಳ ಆದೇಶಗಳನ್ನು ಪ್ರಶ್ನಿಸಿ ಕೆಲವು ರೈತರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣಗಳನ್ನು ದಾಖಲಿಸಿದ್ದು, ಇಂತಹ ಕೆಲವು ಪ್ರಕರಣಗಳಲ್ಲಿ ಮಾನ್ಯ ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆ ನೀಡಲಾಗಿರುತ್ತದೆ. |
| 4 | ಬನ್ನೇರುಘಟ್ಟ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬ್ಯಾಲ ಮರದ ದೊಡ್ಡಿಯಲ್ಲಿ 1980 ರಲ್ಲಿ ಸರ್ಕಾರದಿಂದ ಸ್ವಾತಂತ್ರೋತ್ಸವದ ಪ್ರಯುಕ್ತ ಉಚಿತ ಮನೆ ನಿವೇಶನ ನೀಡಿ ಮೂಲಭೂತ ಸೌಕರ್ಯವಾದ ನೀರಿನ ಟ್ಯಾಂಕ್ ಮತ್ತು ರಸ್ತೆ ಡಾಂಬರೀಕರಣ ಮಾಡಿಸಲು ಮತ್ತು ಅನಾರೋಗ್ಯದ ಪೀಡಿತ ವಯಸ್ಸಾದ ಮತ್ತು ಕೊರೋನಾ ರೋಗ ಕಾರಣಗಳಿಂದ ಅನೇಕ ವರ್ಷಗಳಿಂದ ಬೇಸಾಯ ಮಾಡದೆ ಇರುವವರಿಗೆ ಅದೇ ಕಾರಣ ನೀಡಿ ಬೇಸಾಯ ಮಾಡುವುದಕ್ಕೆ | ಬನ್ನೇರುಘಟ್ಟ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬ್ಯಾಲಮರದದೊಡ್ಡಿ ಗ್ರಾಮದಲ್ಲಿ ಇರುವ ಜಮೀನುಗಳನ್ನು ಅರಣ್ಯ ಇಲಾಖೆಯವರು ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆ. |

| | | |
|---|---|---|
| | ತೊಂದರರ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು | |
| 5 | ಮಾನ್ಯ ಉಚ್ಚ ನ್ಯಾಯಾಲಯ ಆದೇಶ ದಾವೆ ಸಂಖ್ಯೆ BHR.WP N09573/1999, WA/1453-64/2005.KLR 2013-14ರಂತೆ 17 ಹಾನೋ ಮತ್ತು 34ರಂತೆ ಅರಣ್ಯ ಇಲಾಖೆ ಕಾಯ್ದೆ 27.02.1964 ರಿಂದ ಜಾರಿಗೆ ಬಂದಿದ್ದು, ಅದಕ್ಕಿಂತ ಹಿಂದೆ ಸರ್ಕಾರದಿಂದ ಸಾಗುವಳಿ ಭೂಮಿ ಮಂಜೂರಾತಿ ಪಡೆದವರಿಗೆ ಅರಣ್ಯ ಇಲಾಖೆ ಪರಿಗಣಿಸಲು ಸೂಚಿಸಿದ್ದರೂ ಎಂದು ಆದೇಶವಿದ್ದು, ಅದನ್ನು ಆನೇಕಲ್ ತಹಸಿಲ್ದಾರರು ಎಲ್.ಎನ್.ಡಿ/ಜ/ಸಿಆರ್/278/16-17 ದಿನಾಂಕ 27.06.2016 ರಂದು ಸರ್ಕಾರದ ಗಮನಕ್ಕೆ ತಂದರೂ ಅಧಿಕಾರಿಗಳು ಅರಣ್ಯ ಮತ್ತು ಕಂದಾಯ ಇಲಾಖೆಯ ಸಮನ್ವಯ ಕೊರತೆಯಿಂದ ಬಡ ಪರಿಶಿಷ್ಟ ಜಾತಿ ಭೋವಿ ಜನರಿಗೆ ತೊಂದರೆಯಾಗುತ್ತಿರುವುದು ಸಕಾರದ ಗಮನಕ್ಕೆ ಬಂದಿದೆಯೇ: (ಸಂಪೂರ್ಣ ಮಾಹಿತಿ ದಾಖಲಾತಿಯೊಂದಿಗೆ ನೀಡುವುದು) | ತಹಶೀಲ್ದಾರ್ ರವರ ಕಛೇರಿ ಪತ್ರ ಸಂಖ್ಯೆ ಎಲ್.ಎನ್.ಡಿ/ಜಿ/ಸಿಆರ್/28/16-17 ದಿನಾಂಕ:20-12-2016 ರಂತೆ ಭೂತಾನಹಳ್ಳಿ ಗ್ರಾಮದ ಸ.ನಂ. 64 ಮತ್ತು 67 ರ ಜಮೀನಿನಲ್ಲಿ ರೈತರು ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವುದನ್ನು ಸಕ್ರಮಗೊಳಿಸಲು ಕೋರಿರುವ ವಿಚಾರದಲ್ಲಿ ಉಪವಿಭಾಗಾಧಿಕಾರಿಗಳು, ಬೆಂಗಳೂರು ದಕ್ಷಿಣ ಉಪವಿಭಾಗ ರವರ ಮೂಲಕ ಜಿಲ್ಲಾಧಿಕಾರಿಗಳ ಕಛೇರಿಗೆ ದಿನಾಂಕ:10.04.2017 ರಂದು ವರದಿ ಸಲ್ಲಿಸಿದ್ದು, ಸದರಿ ವರದಿಯಲ್ಲಿನ ಅಂಶಗಳನ್ನು ಪರಿಶೀಲಿಸಿ, ಜಿಲ್ಲಾಧಿಕಾರಿಗಳ ಕಛೇರಿಯಿಂದ ಪತ್ರ ಸಂ:LND(A)/CR-41/13-14 ದಿನಾಂಕ:24.07.2017 ಮತ್ತು 09.08.2023ರ ಪತ್ರಗಳಲ್ಲಿ ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ-4(1)(ಎ,ಬಿ,ಸಿ) ರಂತೆ ಉಪವಿಭಾಗಾಧಿಕಾರಿಗಳು, Forest Settlement Officer ಆಗಿರುವುದರಿಂದ, ಅದರನ್ವಯ ಪರಿಶೀಲಿಸಿ, ಕ್ರಮ ಕೈಗೊಳ್ಳಲು ಸೂಚನೆಯನ್ನು ಉಪವಿಭಾಗಾಧಿಕಾರಿಗಳು, ಬೆಂಗಳೂರು ದಕ್ಷಿಣ ಉಪವಿಭಾಗ ರವರಿಗೆ ನೀಡಲಾಗಿರುತ್ತದೆ. |

ಸಂಖ್ಯೆ: ಆರ್‌ಡಿ49 ಎಲ್‌ಜಿಕ್ಯೂ 2026

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು